# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/18/2015-16 ದಿನಾಂಕ:27.07.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಲಿಂಗನಗೌಡ್ರು ಬಂದಮ್ಮ ಗಂಡ ಹೇಮಣ್ಣ<br>ಗ್ರಾಮ:-ಸಂಗಮೇಶ್ವರ ತಾ:-ಹೆಚ್.ಬಿ.ಹಳ್ಳಿ | ಬಿ.ಕಮಲಮ್ಮ ಗಂಡ ವಾಸಪ್ಪ<br>ಗ್ರಾಮ:-ಲಟನಕೇರಿ ತಾ:-ಕೂಡ್ಲಿಗಿ |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಕುಡಿತಿನಮಗ್ಗಿ | 201/ಡಿ | 3-65 | ಖುಷ್ಕಿ |
| 2. | ” | ” | 217/ಬಿ | 1-39 | ” |
| 3. | ” | ” | 219/ಬಿ | 3-00 | ” |
| 4. | ” | ” | 219/ಸಿ | 2-43 | ” |
| 5. | ” | ” | 263/ಬಿ/4 | 0-35 | ” |
| 6. | ” | ” | 306/ಸಿ/1 | 1-80 | ” |
| 7. | ” | ” | 363/ಎ | 0-56 | ” |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಕುಡಿತಿನಮಗ್ಗಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಸಂಗಮೇಶ್ವರ ಗ್ರಾಮದ ನಿವಾಸಿಯಾದ ಲಿಂಗನಗೌಡ್ರು ಬಂದಮ್ಮ ಗಂಡ ಹೇಮಣ್ಣ ಇವರು ಪಾಲು ವಿಭಾಗದ ಪ್ರಕಾರ ಹಕ್ಕುಬದಲಾವಣೆಯನ್ನು ಮಾಡಲು ದಿನಾಂಕ:08.04.2015 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸನ್ನು ದಿನಾಂಕ:18.04.2015 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:15.05.2015 ರಂದು ಬಿ.ಕಮಲಮ್ಮ ಗಂಡ ವಾಸಪ್ಪ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.69/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:10.06.2015 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:10.06.2015 ರಿಂದ 13.07.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ದಿನಾಂಕ:10.06.2015 ರಂದು ಅರ್ಜಿದಾರರು ಗೈರುಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ಹೇಳುವಂತೆ; ಸದರಿ ಜಮೀನಿನ ಪಟ್ಟಾದಾರರಿಗೆ ಎರಡನೇ ಹೆಂಡತಿಯಾಗಿದ್ದು ಈ ಜಮೀನಿನಲ್ಲಿ ನನಗೆ ಪಾಲು ಇರುತ್ತದೆ ಎಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಮುಂದುವರೆದು, ತಕರಾರುದಾರರು ಸತತವಾಗಿ ಗೈರುಹಾಜರಾಗಿರುತ್ತಾರೆ. ಅರ್ಜಿದಾರರು ಹಾಜರಾಗಿ ಹೇಳುವಂತೆ; ತಕರಾರುದಾರರಿಗೂ ಮತ್ತು ನಮಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದು ವಂಶವೃಕ್ಷವನ್ನು ಹಾಜರು ಪಡಿಸಿರುತ್ತಾರೆ. ಮತ್ತು ಸದರಿ ಜಮೀನುಗಳು ಮೂಲತ: ನನ್ನ ತಂದೆಯವರ ಆಸ್ತಿಯಾಗಿರುತ್ತದೆ. ಹಾಗೂ ನನ್ನ ತಂದೆ ವಾಸಪ್ಪ ಇವರು ಜೀವಂತ ಇರುವಾಗ

-ಪಾಲು ವಿಭಾಗ ಪತ್ರಕ್ಕೆ ಸಹಿಮಾಡಿರುತ್ತಾರೆ ಮತ್ತು ಸದರಿ ಜಮೀನುಗಳು ಪ್ರಸ್ತುತ ನನ್ನ ತಾಯಿಯಾದ ಬೆನಕನಹಳ್ಳಿ ಪಾರ್ವತಮ್ಮ ಗಂಡ ಲೇಟ್ ವಾಸಪ್ಪ ಇವರ ಹೆಸರಿಗೆ ಪಟ್ಟಾ ಇರುತ್ತದೆ. ಪಾಲುವಿಭಾಗದ ಪ್ರಕಾರ ನನ್ನ ಹೆಸರಿಗೆ ಹಕ್ಕುಬದಲಾವಣೆಯನ್ನು ಮಾಡಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಸದರಿ ಪ್ರಕರಣದಲ್ಲಿ ವಂಶವೃಕ್ಷದಂತೆ ವಾರಸುದಾರರಾದ ಗುರುಬಸವರಾಜ, ಸರಸ್ವತಿ, ಶಂಕ್ರಪ್ಪ ತಂದೆ ಲೇಟ್ ವಾಸಪ್ಪ ಇವರು ಹಾಜರಾಗಿ ಹೇಳುವಂತೆ; ಸದರಿ ಜಮೀನುಗಳು ಲಿಂಗನಗೌಡ್ರು ಬಂದಮ್ಮ ಗಂಡ ಹೇಮಣ್ಣ ಇವರ ಹೆಸರಿಗೆ ಪಾಲು ವಿಭಾಗ ಪ್ರಕಾರ ಹಕ್ಕುಬದಲಾವಣೆ ಮಾಡಲು ಸಮ್ಮತಿಸಿ ನಮ್ಮಗಳ ಯಾವುದೇ ತಂಟೆ ತಕರಾರು ಇರುವುದಿಲ್ಲ ಎಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ಅರ್ಜಿದಾರರ ಹೆಸರಿಗೆ ಪಾಲು ವಿಭಾಗ ಪ್ರಕಾರ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಎಂ.ಆರ್.ನಂ.69/2015-16 ರ ಪ್ರಕಾರ, ಪ್ರಕರಣದಲ್ಲಿ ಈ ಕೆಳಗಿನಂತೆ ಪಾಲು ವಿಭಾಗ ಪ್ರಕಾರ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

| ಕ್ರ.ಸಂ. | ತಾಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ (ಎಕರೆಗಳಲ್ಲಿ) | ಹಕ್ಕು ಬದಲಾವಣೆ ಪಡೆದವರು |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಕುಡಿತಿನಮಗ್ಗಿ | 201/ಡಿ | 3-65 | ಲಿಂಗನಗೌಡ್ರು ಬಂದಮ್ಮ ಗಂಡ ಹೇಮಣ್ಣ ಗ್ರಾಮ:-ಸಂಗಮೇಶ್ವರ |
| 2. | ” | ” | 217/ಬಿ | 1-39 | |
| 3. | ” | ” | 219/ಬಿ | 3-00 | |
| 4. | ” | ” | 219/ಸಿ | 2-43 | |
| 5. | ” | ” | 263/ಬಿ/4 | 0-35 | |
| 6. | ” | ” | 306/ಸಿ/1 | 1-80 | |
| 7. | ” | ” | 363/ಎ | 0-56 | |

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:27.07.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

27/7/16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,ಕೋಗಳಿ
ನಾಡ ಕಛೇರಿ, ಕೋಗಳಿ

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಶುದ್ಧಪ್ರತಿ ಕಡತಕ್ಕೆ.